ಇಸಿಎ 02/2020 ಪಿಡಬ್ಲ್ಯೂ 2 ಪ್ರಶಾಂತ್ ವಿ.ಬಿ.

ದಿನಾಂಕ 30.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ.ಎನ್.ಎಂ.ಜಿ . ವಕೀಲರಿಂದಃ

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಕೆ.ಪಿ.ಕೆ. ವಕೀಲರರಿಂದಃ

ಸಿದ್ರಾಮೇಗೌಡ ನಮ್ಮ ಊರಿನವರಿರುತ್ತಾರೆ. ನಾನು ಐ.ಟಿ.ಐ ವಿಧ್ಯಾಭ್ಯಾಸ ಮಾಡಿರುತ್ತೇನೆ. ಅಪಘಾತವಾದಾಗ ನಾನು ಆಟೋ ಕ್ಯಾಬಿನ್ ನಲ್ಲಿ ಕುಳಿತ್ತಿದ್ದೆ. ಆಟೋ ನಂಬರ್ ಹೇಳಲಾಗುವುದಿಲ್ಲ. ಆಟೋ ಅಶೋಕ್ ಲೈಲ್ಯಾಂಡ್ ಆಗಿದ್ದು, ಬಿಸ್ಕೇಟ್ ಕಲರ್ ಆಗಿತ್ತು. ಕ್ಯಾಬಿನ್ ನಲ್ಲಿ ಡ್ರೈವರ್ ಸೇರಿ ಮೂರು ಜನ ಇದ್ದೇವು. ನಾನು ಆ ದಿನ ಕ್ಯಾಬಿನ್ ನಲ್ಲಿ ಮಧ್ಯೆ ಕುಳಿತುಕೊಂಡಿದ್ದೆ. ನನ್ನ ಬಲಭಾಗದಲ್ಲಿ ಸುನೀಲ್ ಕುಳಿತ್ತಿದ್ದರು. ನಾವು ಮೂರು ಜನ ಸ್ನೇಹಿತರಿರುತ್ತೇವೆ ಅಪಘಾತವಾದ ದಿನ ವಡ್ಡರ ಹಳ್ಳಿಯಿಂದ ಹಾನ್‌ಗಲ್ ಬಳಿಯ ಬೊಮ್ಮನಹಳ್ಳಿಗೆ ಹೋಗುತ್ತಿದ್ದೇವು. ಅಪಘಾತವಾದ ಸ್ಥಳ ಕಾಡಿನ ಜಾಗವಿದ್ದು, ನಿರ್ಜನ ಪ್ರದೇಶವಾಗಿರುತ್ತದೆ. ಅಲ್ಲಿ ಹೆಚ್ಚಿಗೆ ಜನ ತಿರುಗಾಡುವುದಿಲ್ಲ. ಆಟೋದ ಬಲಭಾಗಕ್ಕೆ ಜಕ್ಕಂ ಆಗಿತ್ತು. ನಾವಿಬ್ಬರು ಬಲಭಾಗದಲ್ಲಿ ಕುಳಿತಿದ್ದೇವು, ನಮಗೂ ಏಟಾಗಿರುತ್ತದೆ. ಅಪಘಾತದಲ್ಲಿ ಆದ ಗಾಯಗಳಿಗೆ ಚಿಕಿತ್ಸೆ ಪಡೆದುಕೊಂಡಿದ್ದು, ಆ ಬಗ್ಗೆ ದಾಖಲಾತಿಗಳನ್ನು ತಂದು ಕೊಟ್ಟಿಲ್ಲ. ಸದರಿ ದಾಖಲೆಗಳನ್ನು ತಂದು ಹಾಜರು ಮಾಡಲು ತೊಂದರೆ ಇಲ್ಲ. ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆ ಮತ್ತು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆ ದಿನ ಸಿದ್ರಾಮೆಗೌಡರವರ ಮಗ ಅತಿಯಾಗಿ ಮಧ್ಯ ಸೇವನೆ ಮಾಡಿ ವಾಹನ ಚಲಾಸುತ್ತಿದ್ದ ಎಂದು ಆಸ್ಪತ್ರೆಯ ದಾಖಲಾತಿಗಳಲ್ಲಿ ನಮೂದು ಇದೆ ಎಂದರೆ ಸುಳ್ಳು. ಆ ದಿನ ನಾವು ಸಹ ಮಧ್ಯಪಾನ ಮಾಡಿದ್ದೇವು ಎಂದರೆ ಸುಳ್ಳು. ಗಾಡಿಯ ಎಡಭಾಗಕ್ಕೆ ಜಕಂ ಆಗಿರಲಿಲ್ಲ ಎಂದರೆ ಸುಳ್ಳು. ಅಪಘಾತವಾದಾಗ ನಮ್ಮನ್ನು ಸಿದ್ರಾಮೇಗೌಡನ ಮಗನ ಸ್ನೇಹಿತರಾದ ಸುರೇಶ್ ರೆಡ್ಡಿ ಮತ್ತು ಇತರರು ಬಂದು ಉಪಚರಿಸಿದರು. ಸದರಿ ಸುರೇಶ್ ರೆಡ್ಡಿ ನನ್ನ ಸ್ನೇಹಿತನೆಂದರೆ ಸುಳ್ಳು. ಅಪಘಾತವಾದಾಗ ಡ್ರೈವರ್ ಗೆ ಪ್ರಜ್ಞೆ ಇರಲಿಲ್ಲ. ನಮಗೆ ಪ್ರಜ್ಞೆ ಇತ್ತು. ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ಎಲ್ಲಿಯೂ ಹೇಳಿಕೆ ಕೊಟ್ಟಿಲ್ಲ. ಅಪಘಾತವಾದ ಸ್ಥಳದಲ್ಲಿ ನಾನು ಇದ್ದೆದ್ದರೆ ನಾನು ಸಹ ಪೋಲಿಸರಿಗೆ ಹೇಳಿಕೆ ನೀಡುತ್ತಿದ್ದೆ, ನಾವು ಸ್ಥಳದಲ್ಲಿ

ಇಲ್ಲದೆ ಇರುವುದರಿಂದ ಹೇಳಿಕೆ ನೀಡಿಲ್ಲ ಎಂದರೆ ಸುಳ್ಳು. ಅಪಘಾತವಾದ ಸ್ಥಳದಲ್ಲಿ ಕಾಲುವೆ ಹೋಗಿದ್ದು, ಡಿವೈಡರ್ ಕಟ್ಟಿರುತ್ತಾರೆಂದರೆ ಸುಳ್ಳು. ಆಟೋ ನಿಯಂತ್ರಣ ತಪ್ಪಿ ಎಡಗಡೆಯ ಕಲ್ಲಿಗೆ ಡಿಕ್ಕಿಯಾಗಿ ನಂತರ ಮುಂದೆ ಹೋಗಿ ಮರಕ್ಕೆ ಡಿಕ್ಕಿಯಾಯಿತು. ಸಾಕ್ಷಿಗೆ ಒಂದು ಜರಾಕ್ಸ್ ಫೋಟೋ ತೋರಿಸಲಾಗಿ ನೋಡಿ ಎಡಭಾಗದಲ್ಲಿದ್ದ ತಡೆ ಕಲ್ಲಿಗೆ ಡಿಕ್ಕಿಯಾಗಿ ಸದರಿ ಕಲ್ಲು ಮುರಿದು ಹೋಗಿ ಮುಂದೆ ಮರಕ್ಕೆ ಡಿಕ್ಕಿಯಾಯಿತು ಎಂದು ನುಡಿಯುತ್ತಾರೆ. ಚಾಲಕ ಮತ್ತು ನಾವು ಮಧ್ಯಪಾನ ಮಾಡಿ ಚಲಾಯಿಸಿಕೊಂಡು ಹೋಗಿ ಮರಕ್ಕೆ ಡಿಕ್ಕಿಪಡಿಸಿ ಅಪಘಾತ ಉಂಟಾಗಿರುತ್ತದೆ, ನಾನು ಹೇಳಿದಂತೆ ನಿಯಂತ್ರಣ ತಪ್ಪಿ ಕಲ್ಲಿಗೆ ಡಿಕ್ಕಿಯಾಗಿ ನಂತರ ಮರಕ್ಕೆ ಡಿಕ್ಕಿಯಾಗಿರುವುದಿಲ್ಲ ಎಂದರೆ ಸುಳ್ಳು.

ನಾನು ಅಪಘಾತವಾದಾಗ ಸ್ಥಳದಲ್ಲಿರಲಿಲ್ಲ ಎಂದರೆ ಸುಳ್ಳು. ಒಂದು ವೇಳೆ ನಾನು ಅಪಘಾತವಾದ ಸ್ಥಳದಲ್ಲಿ ಇದ್ದಿದ್ದರೆ ನನಗೂ ಸಹ ಏಟಾಗುತ್ತಿದ್ದವು, ನಾನು ಸ್ಥಳದಲ್ಲಿ ಇಲ್ಲದೇ ಇರುವುದರಿಂದ ನನಗೆ ಯಾವುದೇ ಏಟಾಗಿಲ್ಲ ಮತ್ತು ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಗಳು ಇಲ್ಲ ಎಂದರೆ ಸುಳ್ಳು. ಅರ್ಜಿದಾರರು ನನ್ನ ಸ್ನೇಹಿತರಿರುವುದರಿಂದ ನಾನು ಸ್ಥಳದಲ್ಲಿ ಇಲ್ಲದೇ ಇದ್ದರೂ ಸಹ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸುರೇಶ್ ರೆಡ್ಡಿಯವರು ಸ್ಥಳಕ್ಕೆ ಬಂದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸುಳ್ಳು. ಅದು ನಿರ್ಜನ ಪ್ರದೇಶವಾಗಿದ್ದು, ಅಲ್ಲಿ ಯಾರು ಓಡಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ಅಂಬೂಲೆನ್ಸ್ ಬಂದಿತ್ತು. ಅಂಬೂಲೆನ್ಸ್ ಗೆ ಫೋನ್ ಸಾಗರ್ ಮಾಡಿದ್ದರು. ಪ್ರಕರಣದಲ್ಲಿ ದೂರನ್ನು ಆತನೇ ಕೊಟ್ಟಿರುತ್ತಾರೆ.

<u>ಮರು ವಿಚಾರಣೆ</u> ಇಲ್ಲ,

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ ಶ್ರೀರಂಗಪಟ್ಟಣ.